ನನ್ನನ್ನು ಕಾಡಿದ ಇನ್ನೊಂದು ಸಮಸ್ಯೆ ಏನೆಂದರೆ, ಇದುವರೆಗೆ ನಮ್ಮ ಸಾಹಿತ್ಯದಲ್ಲಿ ಹೆಚ್ಚೆಚ್ಚು ನಾವು ಒಳಗೆ ತೆಗೆದುಕೊಂಡಿದ್ದು ಶಾಬ್ದಿಕ ಸಾಹಿತ್ಯ ಮಾತ್ರ. ತಾತ್ವಿಕತೆಯನ್ನು ನಾವು ಯಾಕೆ ಬದಲಾಯಿಸಿಕೊಳ್ಳಬೇಕಾಗಿದೆ ಅಂತಂದ್ರೆ ಈ ಮೌಖಿಕತೆಯ ಆಯಾಮವನ್ನು ನಮ್ಮ ಅಧ್ಯಯನದ ಒಳಗೆ ತರಬೇಕಾಗಿದೆ. ನಮ್ಮ ಕಾವ್ಯದ ಒಳಹರಿವು ಏನಿದೆ ಅದು ಶುದ್ಧ ಓದಿನ ಆಯಾಮಕ್ಕೆ ಮಾತ್ರ ಒಗ್ಗುವ ಕಾವ್ಯವಲ್ಲ. ನವ್ಯದ ಕೆಲ ಕಾವ್ಯ ಬಿಟ್ಟರೆ ಕನ್ನಡದ ಬಹುಪಾಲು ಕಾವ್ಯ ಅದು ಹೆಚ್ಚೂ ಕಡಿಮೆ ಕೇಳುವ ಕಾವ್ಯ. ನಾವು ಯಾವುದನ್ನು ಕೇಳುವ ಕಾವ್ಯ ಅಂತಾ ಇದ್ದೀವಿ ಅದರಾಚೆ ಒಂದು ದೊಡ್ಡ ಕ್ರಿಯೇಟಿವಿಟಿಯ ಸಮುದ್ರವಿದೆ. ಮೌಖಿಕ ಕಾವ್ಯ ಪರಂಪರೆಯೇನಿದೆ ಅದನ್ನು ಇನ್ನಷ್ಟು ಆಳವಾಗಿ ನಮ್ಮ ಚರ್ಚೆಯ ಒಳಗೆ ತೆಗೆದುಕೊಳ್ಳಬೇಕಾಗಿದೆ. ಇತ್ತೀಚೆಗೆ ಕೆಲವರು ಸಣ್ಣದಾಗಿ ಒಳಗೊಳ್ಳಲಿಕ್ಕೆ ಪ್ರಯತ್ನ ಮಾಡ್ತಾ ಇದ್ದಾರೆ. ಆದರೆ, ಇದು ಸಾಲದು. ಅದನ್ನು ಒಂದು ದೊಡ್ಡ ಥೀಮಾಗಿ ಒಳಗೊಳ್ಳೋದು ಹೇಗೆ ಅಂತ ಯೋಚಿಸಬೇಕಾಗಿದೆ. ಮೌಖಿಕತೆಯ ತಾತ್ವಿಕತೆಯನ್ನು ನಮ್ಮ ಕಾವ್ಯದ ಅನ್ವೇಷಣೆಗೆ ತೆಗೆದುಕೊಳ್ಳಬೇಕಾಗಿದೆ. ಇದು ಕೂಡ ನನಗೆ ಮುಖ್ಯವಾದ ಪ್ರಶ್ನೆ. ಮತ್ತೊಂದು ಪ್ರಶ್ನೆಯೊಂದಿದೆ. ಅದೇನೆಂದರೆ, ನಾವು ಇದುವರೆಗೆ ಕಾವ್ಯ ಅಥವಾ ಸಾಹಿತ್ಯವನ್ನು ಓದುವಾಗ ಅದನ್ನು ಚರಿತ್ರೆಯ ಭಾಗವನ್ನಾಗಿ ನೋಡಿದ್ದೇವೆ. ಅಂದರೆ, ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ, ಸ್ತ್ರೀವಾದಿ ಕಾವ್ಯ ಇತ್ಯಾದಿ. ಅಂದರೆ, ಒಂದು ಇನ್ನೊಂದನ್ನು ತಳ್ಳಿಹಾಕಿ ಬಂದಿದೆ ಅನ್ನೋ ಅರ್ಥದಲ್ಲಿ ಸಾಮಾನ್ಯವಾಗಿ ಗ್ರಹಿಸ್ತಾ ಇರ್ತೀವಿ. ಅಂದರೆ, ಶ್ರೇಣೀಕೃತ ಮಾದರಿಯಲ್ಲಿ ಓದುವ ಅಭ್ಯಾಸಕ್ಕೆ ಒಗ್ಗಿಕೊಂಡಿದ್ದೇವೆ. ಇಂಥದ್ದೊಂದು ಮಾದರಿಯನ್ನು ಬಿಡಬೇಕಾಗಿದೆಯೆ? ಅನ್ನೋ ಪ್ರಶ್ನೆಯನ್ನು ಕೂಡ ನಾವು ಈಗ ಕೇಳಿಕೊಳ್ಳುವ ಅಗತ್ಯವಿದೆ. ಸಾಹಿತ್ಯದ ಸಂವೇದನೆಯನ್ನು ಗ್ರಹಿಸುವಾಗ ಇದರಿಂದ ತೊಡಕುಗಳು ಉಂಟಾಗುವುದೇ ಹೆಚ್ಚು. ಉದಾಹರಣೆಗೆ, ಕುವೆಂಪು ಅವರ ಕಾವ್ಯವನ್ನು ನೋಡುವಾಗ ಸಾಮಾನ್ಯವಾಗಿ ಮುನ್ನೆಲೆಗೆ ಬರುವುದು ಅಲ್ಲಿನ ಭಾವನೆ, ಕಲ್ಪನೆ ಅಥವಾ ಸಾಮಾಜಿಕತೆ. ಹಾಗಾದರೆ, ಕುವೆಂಪು ಕಾವ್ಯ ಎಂದರೆ ಈ ಮೂರು ತ್ರಿಜ್ಯಗಳಲ್ಲಿ ಮಾತ್ರ ಚಲಿಸುವಂಥದ್ದೆ? ಅದಕ್ಕೆ ಅದರದೇ ಆದ ಪ್ರತಿಮಾತ್ಮಕ, ಸಾಂಕೇತಿಕ, ಫಿಲಾಸಾಫಿಕಲ್ ಆದ ಹುಡುಕಾಟಗಳಿಲ್ಲವೆ? ನವ್ಯ ಕಾವ್ಯಕ್ಕೆ ಮಾತ್ರ ಸಂಕೇತ ಪ್ರತಿಮೆಗಳನ್ನು ಅನ್ವಯಿಸುತ್ತೇವಲ್ಲ? ಪಂಪನಿಗೆ ಯಾಕೆ ಅನ್ವಯಿಸಬಾರದು? ಯಾಕೆ ವಚನಕಾರರಿಗೆ ಅನ್ವಯಿಸಬಾರದು? ಈ ತರಹದ ಪ್ರಶ್ನೆಗಳನ್ನೆತ್ತಿಕೊಂಡಾಗ ಈ ಕಾವ್ಯಗಳೆಲ್ಲ ನಮ್ಮ ಕಾಲದಲ್ಲಿ ಸಂಭವಿಸಿದ ತರಹ ಕಾಣಿಸ್ತವೆ. ಇಲ್ಲವಾದರೆ ಅದು ಆಯಾ ಕಾಲಘಟ್ಟದಲ್ಲಿ ಸಂಭವಿಸಿದ ಅಭಿವ್ಯಕ್ತಿಯಾಗಿ ಕಾಣಿಸ್ತದೆ. ನಾವೆಲ್ಲರೂ ಓದುತ್ತಿರುವ ಮಾದರಿ ಇದೇ ಆಗಿದೆ. ಇದು ಅಚ್ಚೊತ್ತಿ ಕೂತಿದೆ. ಯಾಕೆಂದರೆ, ನಮ್ಮ ಶಿಕ್ಷಣ ವ್ಯವಸ್ಥೆ ಇಂಥ ಮಾದರಿಯನ್ನೆ ನಮ್ಮ ತಲೆಯಲ್ಲಿ ತುಂಬಿದೆ. ನೀವು ಅದನ್ನು ಚರಿತ್ರೆಯ ಭಾಗವಾಗಿಯೇ ನೋಡಬೇಕು, ಭಿನ್ನ ಭಿನ್ನ ಕಾಲಘಟ್ಟದ ಅಭಿವ್ಯಕ್ತಿಯಾಗಿ ನೋಡಬೇಕು ಇತ್ಯಾದಿ. ಇಂಥ ಮಾದರಿಗಳನ್ನು



ಬಸವರಾಜ ಕಲ್ಗುಡಿ ಅವರೊಂದಿಗೆ ಸಂದರ್ಶಕ ವಿಕ್ರಂ ವಿಸಾಜಿ